


# ಕತೆಗಾರನ ಹೆಂಡತಿ

'ಕತೆಗಾರನ ಹೆಂಡತಿ ಅಂದರೆ
ಹುಚ್ಚನ ಹೆಂಡತಿ'
ಎಂದು ಆಕೆ ಹೇಳುವಾಗ
ಕಣ್ಣೊಳಗೇ ಅವಿತಿದ್ದ
ಜಲಕನ್ನಿಕೆ ಸೆರಗು ತೋಯಿಸಲು
ತಿಣುಕುತ್ತಿದ್ದಳು.

ಬಗಲಿಗೆ ಜೋಳಿಗೆ
ಸಿಕ್ಕಿಸಿಕೊಂಡು
ಪರಿವೇ ಇಲ್ಲದೆ
ಊರೂರು ಅಲೆಯುವ
'ಸಂತ' ಗಂಡನ ಜೊತೆ
ವಾಗ್ವಾದಕ್ಕಿಳಿದಿದ್ದು ಎಷ್ಟೋ ಸಲ;
ಇಲ್ಲದಕ್ಕೂ ಕತೆಗಾರನ
ರೆಡಿಮೇಡ್ ಉತ್ತರ ಒಂದೇ

'ಕತೆಗಾರನಿಗೆ ಅನುಭವ ಬೇಕು...'
ಭಗ್ನಪ್ರೇಮದ ಗುಪ್ತಸಂಬಂಧಗಳಿಗೆ
ಆಗಾಗ್ಗೆ ಆಹುತಿಯಾಗುವ
ಅವನ ಬಗ್ಗೆ ಇವಳಿಗೆ
ದೀರ್ಘ ನಿಟ್ಟುಸಿರು.

ಕಣ್ಣೊಳಗಿನ ನೋವಿನ
ಬಸಿರು ಕರಗಿದಾಗ
ಕಣ್ಣೀರು ಒರೆಸುವುದು
ಮತ್ತದೇ ಅವನ ಒರಟು ಕೈಗಳು;
ಇವಳ ಎದೆಯೊಳಗೆ
ಎಂದೂ ನಂದದ ಜೀವಂತ ಚಿತೆಗಳು
ಕತೆಗಾರನನ್ನು ಇಂದಿಗೂ ಬೆಚ್ಚಗಿಟ್ಟವೆ!

● **ಅಭಿಷೇಕ್ ವೈ.ಎಸ್.**
ಕಲೆ: ಸೃಜನ್